(ದಿನಾಂಕಃ 14.10.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**<u>ಪಾಟೀ ಸವಾಲುಃ ತೀರ್ಪುಋಣಿದಾರರ ಪರ ವಕೀಲರಾದ ಶ್ರೀ ವೈ.ಪಿ.ಎಂ ರವರಿಂದ ಃ-</u>**

1. ನಾನು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ 138/2020 ಕೇವಲ 11 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಜಮೀನಿನ ದಕ್ಷಿಣಕೆ ದಿಕ್ಕಿಗೆ ತೀರ್ಪುಋಣಿದಾರರ ಸರ್ವೆ ನಂ 266/2 ರ ಜಮೀನು ಬರುತ್ತದೆ ಎಂದರೆ ಸರಿಯಲ್ಲ.

2. ತೀರ್ಪುಋಣಿದಾರರು ಈ ದಾವೆಯ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ರಿಪ್ಪನ್ ಪೇಟೆ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ನಾನು ತೀರ್ಪುಋಣಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ಊರಿನಲ್ಲಿ ಸಮಾಧಾನ ಇರುವುದಿಲ್ಲ ಊರಲ್ಲಿ ಇದ್ದವರನ್ನು ಸಹ ಸಮಾಧನದಿಂದ ಇರಲು ಬಿಡುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನಾನು ಈ ದರ್ಕಸ್ತ ಅರ್ಜಿಯನ್ನು ದಾಖಲಿಸುವಾಗ ಯಾವುದೇ ಸೂಕ್ತವಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಈ ದಾವೆಯನ್ನು ಸಲ್ಲಿಸಿದ ನಂತರ ನಾನೇ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ತೀರ್ಪುಋಣಿದಾರರ ಜಮೀನಿನ ಮಧ್ಯ ಗಡಿ ರೇಖೆ ಇರುವುದರಿಂದ ತೊಂದರೆ ಕೊಡುವ ಉದ್ದೇಶ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ.

5. ನನ್ನ ವಿರುದ್ಧ ತೀರ್ಪುಋಣಿದಾರರು ದರ್ಕಸ್ತ ಅರ್ಜಿಯನ್ನು ಸಲ್ಲಿಸಿದ ನಂತರ ನಾನು ಅವರ ವಿರುದ್ಧ ಈ ಸುಳ್ಳು ದರ್ಕಸ್ತ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.